


ಕೋಟೆ ವೀಕ್ಷಣೆಗೆ ದೋಣಿಯಲ್ಲಿ ಪ್ರಯಾಣ.



(33ನೇ ಪುಟದಿಂದ)

ಕೋಟೆ ಸುತ್ತ ಎಷ್ಟೇ ಗಿರಕಿ ಹೊಡೆದರೂ ಅದರ ಪ್ರವೇಶ ದ್ವಾರ ಕಾಣಸಿಗುವುದಿಲ್ಲ. ಇದು ಕೋಟೆಯ ವೈಶಿಷ್ಟ್ಯ. ವೈರಿಗಳಿಂದ ರಕ್ಷಣೆ ಪಡೆಯುವುದೇ ಇದರ ಮೂಲ ಉದ್ದೇಶ. ಇದರ ಪ್ರವೇಶ ದ್ವಾರ ಅಂದಿನ ವಾಸ್ತುಶಿಲ್ಪಿಗಳ ಚಾಣಾಕ್ಷತೆಗೆ ಹಿಡಿದ ಕೈಗನ್ನಡಿಯಾಗಿದೆ. ಎರಡು ಎತ್ತರದ ಬುರುಜುಗಳ ಮಧ್ಯೆ ಹೋದ ನಂತರವೇ ಅಲ್ಲೊಂದು ದ್ವಾರ ಇರುವುದು ಕಣ್ಣಿಗೆ ಬೀಳುತ್ತದೆ. ಈ ಬುರುಜುಗಳ ಎತ್ತರ 40 ಅಡಿ.

ಕೋಟೆ ಪ್ರವೇಶಿಸುತ್ತಿದ್ದಂತೆಯೇ ಶಿವರಾಜೇಶ್ವರ ಮಂದಿರ ಕಾಣಸುತ್ತದೆ. ಶಿವಾಜಿಯ ಪುತ್ರ ರಾಜಾರಾಮ ತನ್ನ ತಂದೆಯ ಸ್ಮರಣಾರ್ಥ ಮಂದಿರವೊಂದನ್ನು ನಿರ್ಮಾಣ ಮಾಡಿ ಅವರ ಗಡ್ಡರಹಿತ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ್ದಾನೆ. ಶಿವಾಜಿ ಬಳಸಿದ್ದ ಎನ್ನಲಾದ ಖಡ್ಗವೂ ಇದೆ. ಇದಕ್ಕೆ ಇಲ್ಲಿ ಪೂಜೆ ಸಲ್ಲಿಸಲಾಗುತ್ತದೆ.

ಉಪ್ಪು ನೀರಿನಿಂದ ಸುತ್ತುವರಿದಿರುವ ಕೋಟೆಯೊಳಗಡೆ ಸಿಹಿ ನೀರಿನ ಮೂರು ಬಾವಿಗಳಿವೆ. ಇಂದಿಗೂ ಅವು ಉತ್ತಮ ಸ್ಥಿತಿಯಲ್ಲಿದ್ದು, ನೀರು ಕೂಡಾ ಕುಡಿಯಲು ಯೋಗ್ಯವಾಗಿದೆ. ಹನುಮಾನ, ಅಮೃತೇಶ್ವರ ಹಾಗೂ ಭವಾನಿ ಮಂದಿರಗಳೂ ಇವೆ. ಅರ್ಧ ಗೋಲಾಕೃತಿಯ 45 ಬುರುಜುಗಳು ಕೋಟೆಯನ್ನು ಬಲಿಷ್ಠಗೊಳಿಸಿವೆ. ಪ್ರವೇಶ ದ್ವಾರದ ಬಲಬದಿಯ ಬರುಜಿನ ಮೇಲೆ ಶಿವಾಜಿಯ ಬಲಹಸ್ತ ಹಾಗೂ ಎಡಪಾದದ ಹೆಜ್ಜೆ ಗುರುತು ಇಂದಿಗೂ ಕಾಣಸಿಗುತ್ತದೆ. ಶಿವಾಜಿ ಇಲ್ಲಿಂದಲೇ ಸಮುದ್ರ ಮಾರ್ಗವಾಗಿ ಕರ್ನಾಟಕಕ್ಕೆ ಪ್ರಯಾಣ ಬೆಳೆಸಿದ್ದ. ಇದು ಶಿವಾಜಿಯ ಮೊದಲ ಸಮುದ್ರ ಪಯಾಣವಾಗಿತ್ತು ಎನ್ನಲಾಗಿದೆ.

ಕೋಟೆಯೊಳಗಿನ ಕೊಠಡಿಗಳು, ಬಂದೀಖಾನೆ, ಶಸ್ತ್ರಾಗಾರ ಎಲ್ಲವೂ ಕಾಲನ ಹೊಡೆತಕ್ಕೆ ಬಲಿಯಾಗಿವೆ. ನೈಸರ್ಗಿಕ ವಿಕೋಪ ಹಾಗೂ ಇನ್ನಿತರ ಕಾರಣಗಳಿಂದ ಕಾಲಗರ್ಭ ಸೇರಿವೆ. ಅವುಗಳ ಅವಶೇಷಗಳನ್ನು ಮಾತ್ರ ಇಲ್ಲಿ ಕಾಣಬಹುದು. ಕೋಟೆ ಕಾವಲು ಪಡೆಯ ವಂಶಸ್ಥರು ಇಲ್ಲಿದ್ದಾರೆ. ಕೋಟೆಯ ಗೋಡೆ 3 ಕಿ.ಮೀ ಉದ್ದ, 30 ಅಡಿ ಎತ್ತರ ಹಾಗೂ 12 ಅಡಿ ಅಗಲವಿದ್ದು, ಕೋಟೆಯು ಸುಮಾರು 50 ಎಕರೆ ಪ್ರದೇಶದಲ್ಲಿದೆ.

ಕೋಟೆಯ ದಕ್ಷಿಣ ಹಾಗೂ ಪಶ್ಚಿಮ ಭಾಗದಲ್ಲಿ ಕಡಲು ಶುಭ್ರವಾಗಿದೆ. ಸೂರ್ಯನ ಬೆಳಕಿನಲ್ಲಿ ಸುಮಾರು 20 ಅಡಿ ಆಳದ ಸಮುದ್ರದ ತಳವೂ ಕಣ್ಣಿಗೆ ಕಾಣುತ್ತದೆ! ಜೀವ ರಕ್ಷಕ ಕವಚ ಧರಿಸಿ ಸಮುದ್ರ ಜೀವಿಗಳನ್ನು ವೀಕ್ಷಿಸಲು ಸಮುದ್ರದ ಆಳಕ್ಕೆ ಇಳಿಯುವ ವ್ಯವಸ್ಥೆಯೂ ಇಲ್ಲಿದೆ. ಇದಕ್ಕಾಗಿ ತಲಾ ರೂ. 250 ಶುಲ್ಕ ಪಡೆಯಲಾಗುತ್ತದೆ. ಆದರೆ ಹೆಚ್ಚಿನ ಪ್ರವಾಸಿಗರು ಭಯದಿಂದ ಇಂತಹ ಸಾಹಸಕ್ಕೆ ಇಳಿಯಲು ಹಿಂಜರಿಯುತ್ತಾರೆ.

ಜಲದುರ್ಗ ಪ್ರದೇಶದಲ್ಲಿ ಎಷ್ಟು ಓಡಾಡಿದರೂ ನಮಗೆ ದಣಿವು ಗೊತ್ತಾಗಲಿಲ್ಲ. ಕಾರಣ ಸುಂದರ, ರಮಣೀಯ ತಾಣಕ್ಕೆ ಭೇಟಿ ನೀಡಿದ ತೃಪ್ತಿ ನಮ್ಮದಾಗಿತ್ತು. ಮಾಲ್ವನದಿಂದ ನೇರವಾಗಿ ಅಂಬೋಲಿಗೆ ಬಂದು ಜಲಪಾತದಲ್ಲಿ ಸ್ನಾನ ಮಾಡಿದೆವು.. ಆಗಷ್ಟೇ ಸೂರ್ಯ ಬಾನಿನಿಂದ ಮರೆಯಾಗಿದ್ದ. ಮನೆ ಬಂದಾಗ ರಾತ್ರಿ 10 ಗಂಟೆಯಾಗಿತ್ತು. ಊಟ ಮಾಡಿ ನಿದ್ದೆಗೆ ಜಾರಿದರೆ ಗಡದ್ದು ನಿದ್ರೆ; ಎಚ್ಚರವಾದದ್ದು ಬೆಳಿಗ್ಗೆಯೇ.